## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು , ಉಡುಪಿ-2.

### ವೈದ್ಯಕೀಯ ನೆರವು ವೇದಿಕೆ

### ಪ್ರಕಟಣೆ

### ಆರೋಗ್ಯ ಮಾಹಿತಿ ಬೇಕೆ? ಶ್ರೀ ಶಾರದಾ ಪತ್ರಿಕೆಗೆ ಬರೆಯಿರಿ!

ಆರೋಗ್ಯ ಮಾಹಿತಿ ಬಗ್ಗೆ ಸಮಸ್ಯೆಗಳೇನಾದರೂ ಇದ್ದರೆ ಪ್ರಶ್ನೆಗಳ ಮೂಲಕ ವಿವರಗಳನ್ನು ಬರೆದು ಕಳುಹಿಸಿದಲ್ಲಿ ಬೇರೆ ಬೇರೆ ವೈದ್ಯಕೀಯ ವಿಭಾಗಗಳಿಗೆ ಸಂಬಂಧಪಟ್ಟ ತಜ್ಞ ವೈದ್ಯರಿಂದ ಚರ್ಚಿಸಿ ಉತ್ತರಗಳನ್ನು ಶ್ರೀ ಶಾರದಾ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಊರು, ಹೆಸರು ಪ್ರಕಟಿಸುವ ಅಗತ್ಯವಿಲ್ಲದಿದ್ದರೆ ಹಾಗೆಯೇ ಪ್ರಕಟಿಸಲಾಗುವುದು. ಆಸಕ್ತರು ಪ್ರಶ್ನೆಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸುವಂತೆ ವೈದ್ಯಕೀಯ ನೆರವು ವೇದಿಕೆಯ ಪ್ರಕಟಣೆಯು ತಿಳಿಸಿದೆ.

**- ಅಧ್ಯಕ್ಷರು, ವೈದ್ಯಕೀಯ ನೆರವು ವೇದಿಕೆ**

**ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102**

## ಶಿಕ್ಷಣ ಮತ್ತು ತರಬೇತಿ ವೇದಿಕೆ

**ಶ್ರೀ ಶಾರದಾ ಮಂಟಪ, ಉಡುಪಿ–2**

### ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ತರಬೇತಿ ಶಿಬಿರ

(ದ್ವಿತೀಯ ಹಂತ)

ಎರಡನೇ ಮತ್ತು ಕೊನೆಯ ಹಂತದ ಶಿಬಿರವು ದಿನಾಂಕ 18–01–2009ನೇ ರವಿವಾರ ಸಮಯ ಬೆಳಿಗ್ಗೆ 9–30ರಿಂದ ಸಾಯಂಕಾಲ 4–30ರ ವರೆಗೆ ಶ್ರೀ ಶಾರದಾ ಮಂಟಪದಲ್ಲಿ ನಡೆಯುವುದು.

ಈ ಶಿಬಿರದಲ್ಲಿ ಎಲ್ಲಾ ವಿಷಯಗಳ ನೀಲನಕಾಶೆ, ಹಿಂದಿನ ಪಬ್ಲಿಕ್ ಪರೀಕ್ಷೆ ಮತ್ತು ಇತ್ತೀಚಿನ ಪೂರ್ವಸಿದ್ಧತಾ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ವಿತರಣೆ ಮತ್ತು ಚರ್ಚೆ, ಗಣಿತ ವಿಷಯದ ಬಗ್ಗೆ ವಿವರವಾಗಿ ಹಾಗೂ ಇತರ ಎಲ್ಲಾ ವಿಷಯಗಳ ಕುರಿತು ಸಂಕ್ಷಿಪ್ತವಾಗಿ ಅಂತಿಮ ಹಂತದ ಮಾಹಿತಿಗಳನ್ನು ನೀಡಲಾಗುವುದು.

ವಿ.ಸೂ : 1) ಪ್ರಥಮ ಹಂತದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಲ್ಲದೆ ಇತರ ವಿದ್ಯಾರ್ಥಿಗಳೂ ಭಾಗವಹಿಸಬಹುದು.
2) ಶಿಬಿರಕ್ಕೆ ಯಾವುದೇ ಶುಲ್ಕ ಇರುವುದಿಲ್ಲ.
3) ಈ ಹಿಂದಿನ ಶಿಬಿರಗಳಲ್ಲಿದ್ದಂತೆ ಊಟ, ಉಪಾಹಾರಗಳ ವ್ಯವಸ್ಥೆ ಇರುತ್ತದೆ.
4) ಆಸಕ್ತ ವಿದ್ಯಾರ್ಥಿಗಳು ವೇದಿಕೆಯ ಸಂಚಾಲಕರಾದ ಶ್ರೀ ಪ್ರಭಾಕರ ಭಂಡಿ ಇವರಲ್ಲಿ ಹೆಸರನ್ನು ನೊಂದಾಯಿಸಬೇಕಾಗಿ ವಿನಂತಿ. (ಫೋನ್ : 94492 54846)

ನಮ್ಮ ಸಮಾಜದ ವಿದ್ಯಾರ್ಥಿಗಳು ಈ ಶಿಬಿರದ
ಸಂಪೂರ್ಣ ಪ್ರಯೋಜನವನ್ನು ಪಡೆಯಲು ಕೋರಲಾಗಿದೆ.

**–ಅಧ್ಯಕ್ಷರು ಮತ್ತು ಸದಸ್ಯರು**

ಶಿಕ್ಷಣ ಮತ್ತು ತರಬೇತಿ ವೇದಿಕೆ ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ–576 102

## ವೇದಾಂತಭಾರತಿ

**(ವೇದ–ವೇದಾಂತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆ)**

ಚಂದ್ರಮೌಳಿ ರಸ್ತೆ, ಕೃಷ್ಣರಾಜನಗರ, ಮೈಸೂರು ಜಿಲ್ಲೆ – 571 602
ದೂರವಾಣಿ : 08223–264371, 262471

### ಸೌಂದರ್ಯಲಹರೀ ಕೋಟ್ಯರ್ಚನೆ

ನಾಡಿನ ಜನರನ್ನು ಆಧ್ಯಾತ್ಮಿಕವಾಗಿ ಎಚ್ಚರಿಸುವ, ಒಂದುಗೂಡಿಸುವ, ಮುನ್ನಡೆಸುವ ನಿಟ್ಟಿನಲ್ಲಿ ವೇದಾಂತಭಾರತಿಯು ಕಳೆದ ಹತ್ತು ವರ್ಷಗಳಿಂದ ತನ್ನ ಅಳಿಲು ಸೇವೆಯನ್ನು ಸಲ್ಲಿಸುತ್ತಾ ಬಂದಿರುವುದು ತಮಗೆ ವಿದಿತವೇ ಆಗಿದೆ.

ಶೃಂಗೇರಿ ಶ್ರೀ ಶಾರದಾಪೀಠಾಧೀಶ್ವರರಾದ ಪರಮಪೂಜ್ಯ ಜಗದ್ಗುರು ಶ್ರೀಶ್ರೀಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಮಹಾಸಂರಕ್ಷಕತ್ವದಲ್ಲಿ, ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ಶಂಕರಭಾರತೀ ಸ್ವಾಮಿಗಳವರ ಸಂರಕ್ಷಕತ್ವ ಹಾಗೂ ಮಾರ್ಗದರ್ಶನದಲ್ಲಿ ಈ ಸಂಸ್ಥೆಯು ಶ್ರೀ ಶಂಕರಭಗವತ್ಪಾದರ ತತ್ತ್ವಗಳನ್ನು ಜನಮನಕ್ಕೆ ತಲುಪಿಸುವುದಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ಸನ್ನು ಕಂಡಿದೆ.

ಸೌಂದರ್ಯಲಹರಿಯು ಆಚಾರ್ಯಕೃತ ಸ್ತೋತ್ರಗಳಲ್ಲೇ ಅತ್ಯಂತ ಮಹತ್ವದ ಸ್ತೋತ್ರವೆಂದು ಪರಿಗಣಿಸಲ್ಪಟ್ಟಿದೆ. ಇದು ಮಂತ್ರಕ್ಕೆ ಸಮಾನವಾದುದು. ಪಠಿಸುವವರ ಸತ್ಕಾಮನೆಗಳನ್ನು ಪೂರೈಸುವ ಕಾಮಧೇನು ಎಂದು ಸಾಧಕರು ಒಪ್ಪಿದ ಸ್ತೋತ್ರ. ಅನೇಕರು ಈ ಸ್ತೋತ್ರದ ಪಾರಾಯಣದಿಂದ ಇಷ್ಟಸಿದ್ಧಿಯನ್ನು ಪಡೆದುಕೊಂಡಿದ್ದಾರೆ. ಇದರ ಲಾಭ ನಾಡಿನ ಸಮಸ್ತರಿಗೂ ಸಿಗಲಿ ಎಂಬ ಉದ್ದೇಶದಿಂದ ವೇದಾಂತಭಾರತೀಯು ದಿನಾಂಕ 07–12–2008ರ ಭಾನುವಾರ ಸೌಂದರ್ಯಲಹರೀ ಕೋಟ್ಯರ್ಚನೆ ಎಂಬ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಿದೆ. ಅಂದು ನಾಡಿನ ಲಕ್ಷಾಂತರ ಮಾತೆಯರು, ಪುರುಷರು ಮತ್ತು ಮಕ್ಕಳು ಸೌಂದರ್ಯಲಹರಿಯನ್ನು ಒಂದು ಕೋಟಿ ಸಂಖ್ಯೆಯಲ್ಲಿ ಪಠಿಸಲಿದ್ದಾರೆ. ಪ್ರಾರ್ಥನೆಯು ಸಾಮೂಹಿಕವಾದಾಗ ಅದಕ್ಕೊಂದು ವಿಶೇಷಶಕ್ತಿ ಬರುತ್ತದೆಂಬುದು ಲೌಕಿಕದಲ್ಲಿ ಹೇಗೋ ಹಾಗೆ ಆಧ್ಯಾತ್ಮಿಕದಲ್ಲಿಯೂ ಸತ್ಯ. ಶೃಂಗೇರಿ ಜಗದ್ಗುರುಗಳಾದ ಪರಮಪೂಜ್ಯ ಶ್ರೀಶ್ರೀಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ಈ ಕಾರ್ಯಕ್ರಮಕ್ಕೆ ತಮ್ಮ ಪೂರ್ಣಾನುಗ್ರಹವನ್ನು ದಯಪಾಲಿಸಿದ್ದಾರೆ. ಲೋಕದ ಸಮಸ್ತರ ಕಲ್ಯಾಣವೊಂದನ್ನೇ ಗುರಿಯಾಗಿಟ್ಟುಕೊಂಡು ಆಚಾರ್ಯ ಶಂಕರಭಗವತ್ಪಾದರಿಂದ ಸ್ತುತಿಸಲ್ಪಟ್ಟ ಆ ಜಗನ್ಮಾತೆಯು ಆಚಾರ್ಯರೇ ಹೇಳಿದಂತೆ ಬೇಡಿದ್ದಕ್ಕಿಂತಲೂ ಹೆಚ್ಚಿನದನ್ನು ಕರುಣಿಸುವವಳು. ನಾಡಿನ ಲಕ್ಷ ಲಕ್ಷ ಕಂಠಗಳಿಂದ ಕೋಟಿ ಬಾರಿ ಪ್ರಾರ್ಥಿಸಲ್ಪಟ್ಟ ಆ ತಾಯಿಯು ಲೋಕದ ಸಂಕಟವನ್ನು ನಿವಾರಿಸಿ ಶೀಘ್ರವಾಗಿ ನಮಗೆ ಶ್ರೇಯೋಮಾರ್ಗವನ್ನು ಕರುಣಿಸುವುದರಲ್ಲಿ ಸಂದೇಹವಿಲ್ಲ.

***ಬನ್ನಿ. ಕೋಟ್ಯರ್ಚನೆಗಾಗಿ ನಾವೆಲ್ಲ ಸಿದ್ಧರಾಗೋಣ, ಅದರಲ್ಲಿ ಭಾಗವಹಿಸಿ ಶ್ರೇಯೋಭಾಗಿಗಳಾಗೋಣ***

| | | |
|---|---|---|
| **ಡಾ। ಶ್ರೀಧರ ಭಟ್ಟ ಐನಕೈ** | **ವಿಶ್ವಸ್ತರು** | **ವಿದ್ವಾನ್ ಅನಂತಶರ್ಮಾ ಭುವನಗಿರಿ** |
| ನಿರ್ದೇಶಕರು, ವೇದಾಂತಭಾರತೀ | ವೇದಾಂತಭಾರತೀ | ವಿದ್ವಾನ್ ಜಿ. ಮಹಾಬಲೇಶ್ವರ ಭಟ್ಟ |
| | | ಸಂಚಾಲಕರು, ಸೌಂದರ್ಯಲಹರೀ ಕೋಟ್ಯರ್ಚನೆ |

## ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾ (ರಿ.)

**87, ವೆಂಕಟಾದ್ರಿ 9ನೇ ಮುಖ್ಯರಸ್ತೆ ಸರಸ್ವತೀ ಪುರಂ, ಮೈಸೂರು – 9**

### ಕ್ರಿಕೆಟ್ ಪಂದ್ಯಾಟ

ಮೈಸೂರಿನ ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭೆಯು ಸಮಾಜ ಬಾಂಧವರಿಗಾಗಿ 'ಟೆನ್ನಿಸ್‌ಬಾಲ್ ಕ್ರಿಕೆಟ್' ಪಂದ್ಯಾವಳಿಯನ್ನು ತಾ.30–11–2008ರಂದು ವ್ಯವಸ್ಥೆ ಮಾಡಿದೆ.

ಮೊದಲ ಪಂದ್ಯವು 'ಲೀಗ್' ಆಧಾರದಲ್ಲಿ (8 ನಿಗದಿತ ಓವರ್‌ಗಳು) ನಡೆಯುವುದು. ಸೆಮಿಫೈನಲ್ ಪಂದ್ಯವು 'ನಾಕ್‌ಔಟ್' ಆಧಾರದಲ್ಲಿ (ನಿಗದಿತ 10 ಓವರ್‌ಗಳು) ನಡೆಯುವುದು. ಫೈನಲ್ ಪಂದ್ಯಕ್ಕೆ ನಿಗದಿತ 12 ಓವರ್‌ಗಳು. ಪಂದ್ಯಾಟಗಳು ಬೆಳಿಗ್ಗೆ 8–00 ಗಂಟೆಗೆ ಪ್ರಾರಂಭವಾಗುತ್ತದೆ.

ತಾ.25–11–2008ರೊಳಗೆ ನಿಮ್ಮ ತಂಡವನ್ನು ನೊಂದಾಯಿಸಿ ಪಂದ್ಯಗಳಲ್ಲಿ ಭಾಗವಹಿಸಿ ಈ ಕ್ರಿಕೆಟ್ ಪಂದ್ಯಾಟವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ. ಹೆಚ್ಚಿನ ಮಾಹಿತಿಗಾಗಿ ಇವರನ್ನು ಸಂಪರ್ಕಿಸಿ

1) **ಗಣೇಶ್ ಅಧಿಕಾರಿ ಕೆ.ವಿ. ಮೊಬೈಲ್ : 94480 69182**
2) **ಆನಂದ ಕುಮಾರ್ ಮೊಬೈಲ್ : 94498 36388**
3) **ಎಂ. ಆರ್. ಜಗದೀಶ ರಾವ್ ಮೊಬೈಲ್ : 99458 52225**

## ಶ್ರೀಶಾರದಾರಾಮ ಸೇವಾ ಪ್ರತಿಷ್ಠಾನ, ಬಯಂಬು, ಅಜ್ಜಾವರ
## ಶ್ರೀಶಂಕರಭಾರತೀ ಪಾಠಶಾಲೆ, ಬಯಂಬು, ಅಜ್ಜಾವರ, ದ.ಕ.

ಶೃಂಗೇರಿಯ ಜಗದ್ಗುರುಗಳಾದ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ತಮ್ಮ ದಿವ್ಯ ಹಸ್ತದಿಂದ ಉದ್ಘಾಟಿಸಿದ ಈ ಪಾಠಶಾಲೆಯಲ್ಲಿ ನಮ್ಮ ಸಮಾಜದ ವಿದ್ಯಾರ್ಥಿಗಳಿಗೆ, ಆಶ್ವಲಾಯನ ಪ್ರಯೋಗ (ಋಗ್ವೇದಿಯ ಪೌರೋಹಿತ್ಯ) ಪಾಠಗಳನ್ನು (4 ವರ್ಷಗಳ ಅವಧಿ) ಹೇಳಿಕೊಡಲಾಗುವುದು. 7ನೇ ತರಗತಿಯ ವರೆಗೆ ಲೌಕಿಕ ವಿದ್ಯೆಯನ್ನು ಕಲಿತಿರಬೇಕು. ಉಚಿತ ಅಧ್ಯಯನ, ಭೋಜನ, ವಸತಿಗಳ ವ್ಯವಸ್ಥೆ ಇರುವ ಈ ಪಾಠಶಾಲೆಯ ಪ್ರಯೋಜನವನ್ನು ಸಮಾಜಬಾಂಧವರು ಪಡೆದುಕೊಳ್ಳಬೇಕಾಗಿ ವಿನಂತಿ.

**–ಧರ್ಮದರ್ಶಿಗಳು**

## ಕಾಸರಗೋಡು ಶಿವಬ್ರಾಹ್ಮಣ ಸಭಾದ ವಾರ್ಷಿಕ ಮಹಾಸಭೆ ಮತ್ತು ಜಿಲ್ಲಾ ಸಮಾವೇಶ

ಕಾರಗೋಡು ಶಿವಬ್ರಾಹ್ಮಣ ಸಭಾದ ವಾರ್ಷಿಕ ಮಹಾಸಭೆ ಹಾಗೂ ಜಿಲ್ಲಾ ಸಮಾವೇಶವು ತಾ.02–11–2008ನೇ ಆದಿತ್ಯವಾರ ಕಾಸರಗೋಡಿನ ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಸಭಾಂಗಣದಲ್ಲಿ ನೆರವೇರಿತು.

ಕು। ಇಂಚರ ಇವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಮಹಾಸಭೆಯ ಅಧ್ಯಕ್ಷೆಯನ್ನು ಶ್ರೀ ಎ.ವಿ. ಶ್ಯಾನುಭಾಗರು ವಹಿಸಿದ್ದರು. ಡಾ। ವಿ.ಪಿ. ರಾವ್ ಸ್ವಾಗತ ಭಾಷಣ ಮಾಡಿದ ಬಳಿಕ ಕಾರ್ಯದರ್ಶಿ ಶ್ರೀ ಬಿ.ಜಿ. ರಾವ್ ಸಭಾದ ವಾರ್ಷಿಕ ಕಾರ್ಯಕ್ರಮ ಹಾಗೂ ಚಟುವಟಿಕೆಗಳ ಬಗ್ಗೆ ವರದಿಯನ್ನು ಓದಿದರು. ಮಹಿಳಾ ಘಟಕದ ವರದಿಯನ್ನು ಶ್ರೀಮತಿ ಮಾಲತಿ ಜಗದೀಶ್ ಆವರು ಓದಿದರು. ಕೋಶಾಧಿಕಾರಿಗಳಾದ ಶ್ರೀ ಶುಭಕರ ಶ್ಯಾನುಭಾಗ್ ವಾರ್ಷಿಕ ಲೆಕ್ಕಪತ್ರಗಳನ್ನು ಮಂಡಿಸಿದರು. ಸಭೆಯ ವಾರ್ಷಿಕ ಲೆಕ್ಕಪತ್ರಗಳನ್ನು ಸರ್ವಾನುಮತದಿಂದ ಅನುಮೋದಿಸಿದ ಬಳಿಕ ಶ್ರೀ ಎ.ವಿ. ಶ್ಯಾನುಭಾಗರು ಅಧ್ಯಕ್ಷೀಯ ಭಾಷಣ ಮಾಡಿದರು. ಶ್ರೀಮತಿ ಸುಮಂಗಲ ಮನೋಹರ ಆವರ ಧನ್ಯವಾದಗಳೊಂದಿಗೆ ವಾರ್ಷಿಕ ಮಹಾಸಭೆಯು ಕೊನೆಗೊಂಡಿತು.

ನಂತರ 11–00 ಗಂಟೆಗೆ ಕಾಸರಗೋಡು ಜಿಲ್ಲಾ ಸಮಾವೇಶವು ಶ್ರೀಮತಿ ಪ್ರಭಾರಮೇಶ್‌ರವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಡಾ। ಸತ್ಯನಾಥ ಕಳನಾಡು ಇವರು ಸ್ವಾಗತ ಕೋರಿದರು. ಸಭೆಯ ಉದ್ಘಾಟನೆಯನ್ನು ಶ್ರೀ ಎಸ್. ಸೋಮಶೇಖರ್, ಜನರಲ್ ಮೆನೇಜರ್ ಎಂ.ಸಿ.ಎಫ್. ಇವರು ನೆರವೇರಿಸಿದರು. ಸಭಾದ ಮುಖ್ಯ ಪತ್ರಿಕೆಯಾದ "ಶಿವಗಂಗಾ"ವನ್ನು ಶ್ರೀಮತಿ ಶೋಭಿತಾ ಸತೀಶ್ ಆವರು ಬಿಡುಗಡೆಗೊಳಿಸಿದರು. ಉದ್ಘಾಟನೆಯ ನಂತರ ಶ್ರೀ ಸೋಮಶೇಖರ್‌ರವರು ಸಮಾಜದ ಅಭಿವೃದ್ಧಿಗೆ ಸಂಘಟನೆಯ ಅಗತ್ಯವನ್ನು ಒತ್ತಿ ಹೇಳಿದರು. ಇನ್ನೋರ್ವ ಅತಿಥಿಗಳಾದ ಶ್ರೀ ಪಿ. ಸಂಜಯ್ ಕುಮಾರ್ ಇವರು ಸಂಘದ ಚಟುವಟಿಕೆಗಳಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಂಡರು. ಸಭೆಯಲ್ಲಿ ಪರಿಕಳ ಶ್ರೀಧರ ರಾವ್ ಸ್ಮಾರಕ ದತ್ತಿನಿಧಿ ಚಾಲನೆಯನ್ನು ಶ್ರೀಯುತ ಎ.ಎಸ್. ರಾವ್ ಅವರು ನೆರವೇರಿಸಿದರು. ಅಧ್ಯಕ್ಷರ ಭಾಷಣ ಮತ್ತು ಶ್ರೀಮತಿ ರಾಜೇಶ್ವರಿ ಶುಭಕರ ಶ್ಯಾನುಭಾಗ್ ಇವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ತದನಂತರ ಶ್ರೀ ಕ್ಷೇತ್ರದಲ್ಲಿ ಮಹಾಪೂಜೆಯು ನಡೆದು ಎಲ್ಲರೂ ಪ್ರಸಾದ ಸ್ವೀಕರಿಸಿದರು. ಅಪರಾಹ್ನ 2–00 ಗಂಟೆಗೆ ಶ್ರೀ ಕೆ.ಜಿ. ಶ್ಯಾನುಭಾಗರ ನೇತೃತ್ವದಲ್ಲಿ ಶ್ರೀ ರಾಮಕೃಷ್ಣ ಕಾಟುಕುಕ್ಕೆ ಮುಂತಾದವರಿಂದ ಸಂಗೀತ ಕಾರ್ಯಕ್ರಮ ನಡೆಯಿತು. 4–00ಗಂಟೆಗೆ ಸಮರೋಪ ಹಾಗೂ ಸನ್ಮಾನ ಕಾರ್ಯಕ್ರಮ ಪ್ರಾರಂಭವಾಯಿತು. ಡಾ। ಕೆ.ಕೆ. ಶ್ಯಾನುಭಾಗ್ ಸ್ವಾಗತ ಭಾಷಣ ಮಾಡಿದರು. ಅತಿಥಿಗಳಾದ ಶ್ರೀ ಸದಾಶಿವ ಶ್ಯಾನುಭಾಗ ಕಿರಿಮಂಜೇಶ್ವರ ಮತ್ತು ಶ್ರೀ ರಾಮಕೃಷ್ಣ ಕಾಟುಕುಕ್ಕೆ ಆಗಮಿಸಿದ್ದರು. ಶ್ರೀ ಕು। ಶ್ರೇಯಸ್ವಿ ಅವರಿಗೆ ಕಲಾ ಪ್ರತಿಭಾ ಪುರಸ್ಕಾರ ಹಾಗೂ ಕು। ದೀಕ್ಷಾ ಅವರಿಗೆ ಲಲಿತ ಕಲಾ ಪ್ರಶಸ್ತಿಯನ್ನು ನೀಡಲಾಯಿತು. ಅನಂತರ ಸಂಗೀತ ಸಾಧನೆಗಾಗಿ ಶ್ರೀಮತಿ ರಾಧಾಮುರಳೀಧರ ಇವರಿಗೆ ಅಧ್ಯಕ್ಷರು ಸನ್ಮಾನ ನೀಡಿ ಗೌರವಿಸಿದರು. ಹಾಗೆಯೇ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ತೋರಿದ ಶ್ರೀ ಕೃಷ್ಣಯ್ಯ, ಶ್ರೀಮತಿ ವಿಜಯಲಕ್ಷ್ಮೀ ಶ್ಯಾನುಭಾಗ್ ಮತ್ತು ಶ್ರೀ ಕಾರ್ತಿಕ್ ಸುಬ್ರಹ್ಮಣ್ಯ ಅವರನ್ನು ಅಭಿನಂದಿಸಲಾಯಿತು. ಸಮಾರೋಪ ಭಾಷಣವನ್ನು ಮಾಡಿದ ಅಧ್ಯಕ್ಷರು ಸಹಕಾರ ನೀಡಿದ ಎಲ್ಲಾ ಸದಸ್ಯರನ್ನು ಅಭಿನಂದಿಸಿದರು. ಜೊತೆ ಕಾರ್ಯದರ್ಶಿ ಶ್ರೀ ಎಂ. ಚಂದ್ರಶೇಖರ್ ಇವರ ಧನ್ಯವಾದ ಸಮರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

Owned & Published by ·. Y. Bhuvanendra Rao, Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org